ಅಥಣಿ ತಾಲ್ಲೂಕಿನ ಹ್ಯಾಮ್ಲೆಟ್‌ಗಳನ್ನು ಕಂದಾಯ ಹಳ್ಳಿಗಳನ್ನಾಗಿ ಘೋಷಿಸಲು ಒತ್ತಾಯ

534 - ಶ್ರೀ ಎ.ಬಿ. ಜಕನೂರ್(ಕಾಗ್‌ವಾಡ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕಿನಲ್ಲಿರುವ ಹ್ಯಾಮ್‌ಲೆಟ್‌ಗಳ ಸಂಖ್ಯೆ;

ಆ) ಇತರೇ ಹಳ್ಳಿಗಳಿಗೆ ದೊರಕುವ ಸೌಲಭ್ಯಗಳು ಇವುಗಳಿಗೆ ದೊರಕದಿರುವುದರಿಂದ ಕಂದಾಯ ಹಳ್ಳಿಗಳನ್ನಾಗಿ ಘೋಷಿಸಲು ಸರ್ಕಾರ ಪರಿಶೀಲಿಸುತ್ತಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಸರ್ಕಾರ ಅವುಗಳನ್ನು ಕಂದಾಯ ಹಳ್ಳಿಗಳನ್ನಾಗಿ ಘೋಷಿಸುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 26

ಆ) ಹೌದು. ಪರಿಶೀಲನೆಯಲ್ಲಿದೆ.

ಇ) 1991ಭಾರತೀಯ ಜನಗಣತಿ ಮುಕ್ತಾಯವಾದ ನಂತರ. ಪರಿಶೀಲಿಸಲಾಗುವುದು.

ಶ್ರೀ ಎ.ಬಿ. ಜಕನೂರು : ಮಾನ್ಯ ಅಧ್ಯಕ್ಷರೆ, 3ನೇ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು, "Soon after completion of census, this will be examined" ಎಂದು ಹೇಳಿದ್ದಾರೆ. ಹ್ಯಾಮ್‌ಲೆಟ್ಸ್ ಅನ್ನು ರೆವಿನ್ಯೂ ವಿಲೇಜಸ್ ಎಂದು ಡಿಕ್ಲೇರ್ ಮಾಡಲಿಕ್ಕೆ ಸೆನ್‌ಸಸ್‌ನಿಂದ ಏನು ಅಡಚಣೆ ಬರುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿರುವ ಹಾಗೆ, ಗೌರ್ನಮೆಂಟ್ ಆಫ್ ಇಂಡಿಯಾದವರು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಯಾವುದೇ ಜಿಲ್ಲೆಯದಾಗಲಿ, ಹಳ್ಳಿಯದಾಗಲಿ, ತಾಲ್ಲೂಕಿನದಾಗಲಿ, ಜ್ಯುರಿಡಿಕ್ಷನ್ 30-6-1991ರವರೆಗೆ ಚೇಂಜ್ ಮಾಡಬಾರದು, ಬೌಂಡರಿ ಚೇಂಜ್ ಮಾಡಬಾರದೆಂದು ಒಂದು ಸರ್ಕ್ಯುಲರ್ ಇಷ್ಯೂ ಮಾಡಿದ್ದಾರೆ. ಆ ಅವಧಿ ಮುಗಿದ ಮೇಲೆ ನಾವು ಎಲ್ಲೆಲ್ಲಿ ಹ್ಯಾಮ್‌ಲೆಟ್ ಅನ್ನು ರೆವಿನ್ಯೂ ವಿಲೇಜಸ್ ಆಗಿ ಕನ್‌ವರ್ಟ್ ಮಾಡಬೇಕು ಅನ್ನತಕ್ಕದರ ಬಗ್ಗೆ ಪರಿಶೀಲನೆ ಮಾಡಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗಾಗಲೇ ಜನಗಣತಿ ಮುಗಿದಿದೆ.

ಶ್ರೀ ಎ.ಬಿ. ಜಕನೂರು : ಪರಿಶೀಲನೆ ಮಾಡುತ್ತೀರೋ ಅಥವಾ ಮಾಡುತ್ತೀರೂ, ಏಕೆಂದರೆ, ಪರಿಶೀಲನೆ ಮಾಡುವುದು ಬೇರೆ ಮಾಡುತ್ತೇವೆ ಎನ್ನುವುದು ಬೇರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಮಾರು 26 ಸಾವಿರ ರೆವಿನ್ಯೂ ವಿಲೇಜಸ್ ಇದ್ದರೆ ಅಕ್ಟ್ ಹ್ಯಾಮ್‌ಲೆಟ್‌ಗಳು ಮತ್ತು ತಾಂಡಾಗಳು ಇವೆ. ಅದರಲ್ಲಿ ಎಷ್ಟನ್ನು ಮಾಡಬೇಕೆಂದು ಈಗಾಗಲೇ ಅಡ್ಮಿನಿಸ್ಟ್ರೇಟೀವಾಗಿ ತೀರ್ಮಾನ ತೆಗೆದುಕೊಂಡಿದ್ದೇವೆ. ಐನೂರಕ್ಕಿಂತಲೂ ಹೆಚ್ಚಿಗೆ ಪಾಪುಲೇಶನ್ ಎಲ್ಲಿದೆ ಅಂತಹ ಹ್ಯಾಮ್‌ಲೆಟ್ ತಾಂಡಗಳಿಗೆ ಒಂದು ರೆವಿನ್ಯೂ ವಿಲೇಜ್‌ನ ಸ್ಟೇಟಸ್ ಕೊಡಬೇಕೆಂದು ನಾವು ಅಡ್ಮಿನಿಸ್ಟೇಟಿವ್ ಆಗಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಯಾವ ರೀತಿಯಾಗಿ ನಮಗೆ ಫೈನಾನ್ಸಿಯಲ್ ಸಪೋರ್ಟ್ ಸಿಗುತ್ತದೆಯೋ ಆ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಹಂತಹಂತವಾಗಿ ಇವನ್ನು ಡಿಕ್ಲೇರ್ ಮಾಡತಕ್ಕದ್ದನ್ನು ಮಾಡಬಹುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ ; ಹ್ಯಾಮ್‌ಲೆಟ್‌ಗಳ ಬಗ್ಗೆ ಮಾನ್ಯ ಜಕನೂರ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಪರಿಶೀಲನೆಯಲ್ಲಿದೆ, ಮತ್ತೆ ಪರಿಶೀಲಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಪರಿಶೀಲಿಸುವುದಕ್ಕೆ

ಇವರು ಯಾರು? ನನಗೆ ಬಹಳ ದುಃಖವಾಗುತ್ತದೆ. ಇಂತಹ ಸಣ್ಣ ಸಣ್ಣ ಪ್ರಾಥಮಿಕ ವಿಷಯಕ್ಕೆ ಸದನದಲ್ಲಿ ನಾನು ಸಂವಿಧಾನ ತರಬೇಕಾಗುತ್ತದೆ.

ಸಂವಿಧಾನದ 2ನೇ ಅಧ್ಯಾಯದಲ್ಲಿ ಆರ್ಟಿಕಲ್ 5ನ್ನು ಓದಿ ಹೇಳುತ್ತೇನೆ. "Every person who has his domicile in the territory of India and who was born in the territory of India shall be a citizen of India"

ಇದು 2ನೇ ಅಧ್ಯಾಯದಲ್ಲಿ ಆರ್ಟಿಕಲ್ 5ರಲ್ಲಿದೆ. As soon as he becomes a citizen of India, he gets linked up with the Part III of the Constitution. ಮೂರನೆಯ ಅಧ್ಯಾಯದಲ್ಲಿರುವ ಮೂಲಭೂತ ಹಕ್ಕುಗಳಿಗೆ ತಕ್ಷಣ ಸಂಬಂಧ ಸೃಷ್ಟಿಯಾಗುತ್ತದೆ. ಪೌರತ್ವದ ಹಕ್ಕು ಕೂಡ ಸಂವಿಧಾನ ಕೊಟ್ಟಿದ್ದಲ್ಲ. ಸಂವಿಧಾನ ಹುಟ್ಟುವುದಕ್ಕೆ ಮುಂಚೆಯೇ ಬರುವಂಥ ನೈಸರ್ಗಿಕ ಹಕ್ಕು It is a natural right. It is not even a constitutional right.

ಈಗ ನನಗೆ ಈ ಅನುಮಾನ ಬರುತ್ತಿದೆ. ಇವರು ಈ ದೇಶದ ಜನಗಳಿಂದ ಆಯ್ಕೆಯಾಗಿ ಬಂದು ಸರ್ಕಾರ ನಡೆಸುತ್ತಿದ್ದಾರೋ ಅಥವಾ ಬ್ರಿಟಿಷ್ ರಾಣಿಯ ಪ್ರತಿನಿಧಿಗಳೋ ಎಂದು ಅನುಮಾನ ಬರುತ್ತಿದೆ. They cannot answer like this. ಪರಿಶೀಲನೆಯಲ್ಲಿದೆ, ಪರಿಶೀಲಿಸಲಾಗುವುದು ಎಂದು. You have got to declare them as revenue villages. What else can you do? ಇನ್ನೇನು ಮಾಡುತ್ತೀರಿ? ಕಾರ್ಪೊರೇಷನ್ ಎಂದು ಡಿಕ್ಲೇರ್ ಮಾಡುತ್ತೀರೋ, ಮುನಿಪಾಲಿಟಿ ಎಂದು ಡಿಕ್ಲೇರ್ ಮಾಡುತ್ತೀರೋ? You have got to absorb them into the revenue fold. You have got to do it. You have no other alternative. ದಯವಿಟ್ಟು ಇಂಥ ಉತ್ತರವನ್ನು ಇನ್ನು ಮೇಲೆ ಈ ದೇಶದ ಪ್ರಜೆಗಳಿಗೆ ಕೊಡಬೇಡಿ. ನಿಮ್ಮ ಕರ್ತವ್ಯ ಏನಿದೆ ಎಂದರೆ, ಇದಕ್ಕೆ ಒಂದು ಪರಿಹಾರ ಹುಡುಕಬೇಕು. ಪರಿಶೀಲನೆ ಷ್ಟೂಡುವುದಕ್ಕೆ ನಾವು ನಿಮಗೆ ಬಿಡುವುದಿಲ್ಲ. ಇವುಗಳನ್ನು ಹತ್ತಿರದ ಗ್ರಾಮಕ್ಕೆ ಸೇರಿಸುವಂಥ ಒಂದು ಖಾಯಂ ಆಜ್ಞೆಯನ್ನು ಹೊರಡಿಸಬೇಕು. ಏನು ಮಾಡುತ್ತೀರಿ ಹೇಳಿ ? You have no other alternative. ಪರಿಶೀಲನೆ ಮಾಡುವುದಕ್ಕೆ ನಿಮಗೆ ಅವಕಾಶವೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಸೀನಿಯರ್ ಇದ್ದಾರೆ. ಪ್ರೊಫೆಸರ್ ಇದ್ದಾರೆ, ಬಹಳ ಅನುಭವಸ್ಥರೂ ಇದ್ದಾರೆ. ಅದರ ಬಗ್ಗೆ ನಾನು ಹೇಳುವುದಿಲ್ಲ. ನೀವು ಯಾರು ಎಂದರೆ ನಾವು ಸರ್ಕಾರ. ಜನತೆಯಿಂದ ಎಲೆಕ್ಟ್ ಆಗಿ ಬಂದು ಸರ್ಕಾರ ರಚಿಸಿದ್ದೇವೆ.

Prof. M.D. NANJUNDASWAMY : My doubt is whether you are elected by the people of this country or you are the representative of the British Crown.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಯಾವ ಸರ್ಕಾರ ಬಂದರೂ ಕೂಡ 20,000 ಹ್ಯಾಮ್ಲೆಟುಗಳನ್ನು ತಕ್ಷಣವೇ ರೆವಿನ್ಯೂ ವಿಲೇಜಸ್ ಎಂದು ಡಿಕ್ಲೇರ್ ಮಾಡುವುದಕ್ಕೆ ಆಗುವುದಿಲ್ಲ. ಈ 20,000 ಹ್ಯಾಮ್ಲೇಟ್‌ಗಳನ್ನು ತಾಂಡಾಗಳಲ್ಲಿ ಕನಿಷ್ಠ ಪಕ್ಷ 500 ಪಾಪ್ಯುಲೇಷನ್ ಎಲ್ಲಿದೆ ಅದಕ್ಕೆ ರೆವಿನ್ಯೂ ವಿಲೇಜ್ ಸ್ಟೇಟಸ್ ಕೊಡುವಂಥದ್ದು ಪರಿಶೀಲನೆಯಲ್ಲಿದೆ. ಏಕೆಂದರೆ ಇದನ್ನು ವಿಲ್ಲೇಜ್ ಎಂದು ಡಿಕ್ಲೇರ್ ಮಾಡಿದರೆ ಅದು ಇಂಡಿಪೆಂಡೆಂಟ್ ಆಗುತ್ತದೆ. ಆಗ ಅದಕ್ಕೆ ಮಂಡಲ ಮಾಡಬೇಕಾಗುತ್ತದೆ ವಿಲೇಜ್ ಅಕೌಂಟೆಂಟ್ ಬೇಕಾಗುತ್ತದೆ. ಗ್ರಾಮ ಸಹಾಯಕ ಬೇಕಾಗುತ್ತದೆ ದಳಪತಿ ಬೇಕಾಗುತ್ತದೆ. ಇವೆಲ್ಲವನ್ನೂ ಪರಿಶೀಲಿಸಬೇಕಾಗುತ್ತದೆ. ಇದಕ್ಕೆ ಹಣವೂ ಬೇಕಾಗುತ್ತದೆ. ಹಣ ನಾವು ಕೊಡುವುದಿಲ್ಲ, ನೀವು ಕೊಡುವುದಿಲ್ಲ. ಅದು ಜನರಿಂದ ಬರುವಂಥದ್ದು.

ಜನರಿಂದ ಬರುವಂಥ ಈ ಹಣವನ್ನು ಯಾವ ರೀತಿ ಸದುಪಯೋಗ ಮಾಡಬೇಕು ಎನ್ನುವಂಥದ್ದನ್ನು ಯೋಚನೆ ಮಾಡಬೇಕು. ಆ ಯೋಚನೆ ಮಾಡುವುದಕ್ಕೆ ಟೈಮ್ ಬೇಕು. ಗವರ್ನಮೆಂಟ್ ಆಫ್ ಇಂಡಿಯಾದಿಂದ ಏನು ಸರ್ಕ್ಯುಲರ್ ಬಂದಿದೆ ಅದನ್ನು ಓದಿ ಹೇಳುತ್ತೇನೆ.

"I am directed to enclose herewith a copy of the letter dated 20.2.89 of the Registrar & Census Commissioner of India along with the enclosures on the subject mantaioned above. I state that the official conduct of the census operation during 1991 it should be encured that the boundaries of districts, talukas etc., are not distrubed. It is therefore reqested that the proposals involving the change of jurisdiction of the municipalities, revenue villages, tahsild districts, etc., are not sent to the Government during the period from 1,10.89 to 30.6.91."

ಅದಕ್ಕೆ ಇಲ್ಲಿಯವರೆಗೆ ಒಂದು ಗಡುವನ್ನು ಹಾಕಿದ್ದಾರೆ. ಈ ಅವಧಿ ಮುಗಿದ ಮೇಲೆ ತಕ್ಷಣ ಯಾವುದನ್ನು ಮಾಡಬಹುದು ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಎಲ್ಲಿಯವರೆಗೆ ನಾವು ಅವರಿಗೆ ಸವಲತ್ತು ಕೊಡುವುದಿಲ್ಲ ಡಿಕ್ಲೇರ್ ಮಾಡುವುದಿಲ್ಲ ಅಲ್ಲಿಯವರೆಗೆ ಸವಲತ್ತುಗಳು ಆ ಹಳ್ಳಿಗಳಿಗೆ ಸಿಗುವುದಿಲ್ಲ. ಇದರ ಅರಿವು ನಿಮಗಿದೆ. ಆದರೆ ಎಷ್ಟು ಮಾಡಬೇಕು ಯಾವಾಗ ಮಾಡಬೇಕು ಎನ್ನುವಂಥಾದ್ದನ್ನು ಜೂನ್ ತಿಂಗಳು ಮುಗಿದ ಮೇಲೆ ನಾನು ಹೇಳಬಲ್ಲೆ.

ಪ್ರೋ. ಎಂ.ಡಿ. ನಂಜುಂಡಸ್ವಾಮಿ: ಒಂದೇ ಒಂದು ವಿನಂತಿ ಏನೆಂದರೆ ಇದನ್ನು ಜನಗಣತಿ ಆದಮೇಲೆ ನೀವು ಮಾಡಬೇಕು, ಮಾಡಿ ಪರ್ವಾಗಿಲ್ಲ ಆದರೆ ನೀವು ಮಾಡಲೇಬೇಕು. ಪರಿಶೀಲಿಸುವ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹಾಗಾದರೆ ಏನೆಂದು ಉತ್ತರ ಹೇಳಬೇಕು

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಮಾಡುತ್ತೇವೆಂದು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದರಲ್ಲಿ ಎಷ್ಟು ಮಾಡುತ್ತೇವೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಎಷ್ಟು ಸಾಧ್ಯವೊ ಅಷ್ಟು ಮಾಡುತ್ತೇವೆಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀ ಅಂಜನಮೂರ್ತಿಯವರೇ, ನಿಮ್ಮ ಪ್ರಶ್ನೆಗೆ ಟೈಂ ಕೇಳಿ ಪತ್ರ ಬರೆದಿದೆ.

ಶ್ರೀ ಆಂಜನಮೂರ್ತಿ: ನಾನು ಪ್ರಶ್ನೆ ಕೇಳಿ ಒಂದು ತಿಂಗಳಾಯಿತು. ಇದರಲ್ಲಿ ಸುಮಾರು 1 ಕೋಟಿ ಚಿಲ್ಲರೆ ಜಮೀನನ್ನು ಎನ್‌ಕ್ರೋಚ್ ಮಾಡಿ ಅವ್ಯವಹಾರ ಮಾಡುತ್ತಿದ್ದಾರೆ. ಇದರಲ್ಲಿ ಕಂದಾಯ ಇಲಾಖೆಯ ಜನರು ಶಾಮೀಲಾಗಿದ್ದಾರೆ.

ಅಧ್ಯಕ್ಷರು: ಬಹಳ ಟೈಂ ತೆಗೆದುಕೊಂಡು ಪ್ರಶ್ನೆಗಳನ್ನು ಹಾಕಿದ್ದಾರೆ. ಇದಕ್ಕೆ ಉತ್ತರವನ್ನು ಒದಗಿಸಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾವು ಹೆಚ್.ಯು.ಡಿ. ಬಿ.ಡಿ.ಎ. ಇವರನ್ನೆಲ್ಲಾ ಕೇಳಬೇಕಾಗಿದೆ.

ಶ್ರೀ ಅಂಜನಮೂರ್ತಿ: ಇದರಲ್ಲಿ ಹೆಚ್.ಯೂ.ಡಿ. ಬಿ.ಡಿ.ಎ. ಏನೂ ಬರುವುದಿಲ್ಲ.

ಅಧ್ಯಕ್ಷರು : ಈ ಪ್ರಶ್ನೆ ನಾಗಮಂಗಲ ತಾಲೂಕಿನ ಕಸಬಾ ಹೋಬಳಿಗೆ ಸೇರುತ್ತದೆ.

ಶ್ರೀ ಅಂಜನಮೂರ್ತಿ: ನಾಗಮಂಗಲ ಅಲ್ಲ ನೆಲಮಂಗಲ.

ಅಧ್ಯಕ್ಷರು : ಮಂಡಲ ಪಂಚಾಯ್ತಿಗೂ, ಬಿ.ಡಿ.ಎ.ಗೂ ಏನು ಸಂಬಂಧ?

ಶ್ರೀ ಅಂಜನಮೂರ್ತಿ: ಸಂಬಂಧ ಇದೆ. ಇದರಲ್ಲಿ ಸುಮಾರು 1 ಕೋಟಿ ಬೆಲ್ಲರೆ ಜಮೀನನ್ನು ಎನ್‌ಕ್ರೋಚ್ ಮಾಡಿದ್ದಾರೆ.

ಅಧ್ಯಕ್ಷರು: ಅದಕ್ಕೆ ಉತ್ತರ ಮುಂದಿನ ವಾರ ಬರುತ್ತದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು. ಸಂಬಂಧಪಟ್ಟ ಮಂತ್ರಿಗಳೂ ಇದನ್ನೂ ಗಮನಿಸಬೇಕು. ಯಾವುದು ಕೆಲವು ಅನಾನುಕೂಲವಾಗಿರತಕ್ಕ ಪ್ರಶ್ನೆಗಳು ಬರುತ್ತವೆ ಆ ಪ್ರಶ್ನೆಗಳಿಗೆ ಉದ್ದೇಶಪೂರ್ವಕವಾಗಿಯೋ ಅಥವಾ ಬೇರೆ ಯಾವುದೇ ರೀತಿಯಲ್ಲಿ ಉತ್ತರಗಳು ಈ ಸದನಕ್ಕೆ ಬರುತ್ತಿಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನನಗೆ ಸಂಬಂಧಿಸಿದ 11 ಪ್ರಶ್ನೆಗಳಲ್ಲಿ 9ಕ್ಕೆ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು: ಧನ್ಯವಾದಗಳು. ಆದರೆ ನಾನು ಹೇಳತಕ್ಕಂಥಾದ್ದು ಏನೆಂದರೆ ನೀವು ನಿಮ್ಮ ಪರ್ಸನಲ್ ಅಟೆನ್‌ಷನ್ ಇದಕ್ಕೆ ಹರಿಸಬೇಕು ಎಂದು ಏಕೆ ಹೇಳುತ್ತೇನೆಂದರೆ ಯಾವುದು ಅನಾನುಕೂಲವಾಗುತ್ತದೋ ಅಂತಹ ಪ್ರಶ್ನೆಗಳಿಗೆ ಉತ್ತರ ಬರುತ್ತದೆ ಉದಾಹರಣೆಗೆ ಹ್ಯಾಮ್ಲೆಟ್ ಬಗ್ಗೆಗಿನ ಪ್ರಶ್ನೆಗೆ ಸಲೀಸಾಗಿ ಉತ್ತರ ಬರುತ್ತದೆ ಮತ್ತು ಯಾವ ಬಾಕಿ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಬರುವುದಿಲ್ಲವೋ ಅದರ ಬಗ್ಗೆ ತಾವು ಗಮನಹರಿಸಿ.

ಶ್ರೀ ಅಂಜನಮೂರ್ತಿ: ಇದರಲ್ಲಿ ಏನಾಗಿದೆ ಎಂದರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: 2-3 ದಿನಗಳಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆ.

M.R. SPEAKER: Thank you ಏನೆಂದರೆ ಮುಂದಿನ ಗುರುವಾರ ಸಭೆಯಿಲ್ಲವೆಂದು ಶ್ರೀ ಅಂಜನಮೂರ್ತಿಯವರು ಹೇಳುತ್ತಿದ್ದಾರೆ. ಉತ್ತರ ಮುಂದಿನ ವಾರ ಬರುತ್ತದೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಶ್ರೀ ಬಿ.ಎಚ್.ಬನ್ನಿಕೋಡ್ ಅವರದು. ಬನ್ನಿಕೋಡ್‌ರವರೇ ನಿಮ್ಮ ಪ್ರಶ್ನೆಗೆ ಉತ್ತರ ಇನ್ನೂ ಬಂದಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ ಈಗಾಗಲೇ ತಾವು ಪ್ರಶ್ನೆಗಳಿಗೆ ಸರ್ಕಾರ ಯಾವ ಉತ್ತರ ಕಳುಹಿಸುತ್ತಿದೆ ಎಂದು ಹೇಳಿದ್ದೀರಿ ದಯವಿಟ್ಟು ನನ್ನ ಪ್ರಶ್ನೆಯನ್ನು ನೋಡಬೇಕು.

ಅಧ್ಯಕ್ಷರು: ಬರಗಾಲ ಪರಿಸ್ಥಿತಿ ಬಗ್ಗೆ ತಾನೆ.

ಶ್ರೀ ಬಿ.ಎಚ್. ಬನ್ನಿಕೋಡ್: ಕುಡಿಯುವ ನೀರಿನ ಬಗ್ಗೆ ನಾನು ಕೇಳಿದ್ದೇನೆ. ಅಲ್ಲಿ ಬರಗಾಲ ಇದೆ. ಈಗ ಸಚಿವರಿಗೆ ಮನವಿ ಮಾಡುತ್ತೇನೆ. ಮುಖ್ಯಮಂತ್ರಿಗಳಿಗೆ ಮಾಡುತ್ತೇನೆ ಜಿಲ್ಲಾ ಮಂತ್ರಿ ಶ್ರೀ ಕೆ.ಎಚ್. ಪಾಟೀಲರವರಿಗೆ ಮಾಡುತ್ತೇನೆ. ಜಿಲ್ಲಾಧಿಕಾರಿಗಳಿಗೆ ಮಾಡುತ್ತೇನೆ. ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಸರ್ವಾನುಮತದಿಂತ ಠರಾವು ಮಾಡಿದ್ದೇವೆ. ಕುಡಿಯಲಿಕ್ಕೆ ನೀರು ಇಲ್ಲದೆ ಜನರೆಲ್ಲಾ ವಲಸೆ ಹೋಗುತ್ತಿದ್ದಾರೆ. ದನಗಳೆಲ್ಲಾ ಸಾಯುತ್ತಿದೆ. ಇದಕ್ಕೆ ಉತ್ತರ ಕೊಡಲು ಸಮಯ ಬೇಕೆಂದರೆ ಹೇಗೆ?

ಸರ್ಕಾರಕ್ಕೆ ಜನರ ಬಗ್ಗೆ ನಿಜವಾಗಿ ಕಾಳಜಿ ಇದೆಯೆ? ಕುಡಿಯುವ ನೀರಿನ ಅಭಾವ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಅದಕ್ಕೆ ಉತ್ತರಿಸುವುದಕ್ಕೆ ಸಮಯಬೇಕೆಂದರೆ ಹೇಗೆ? ನಾವು ಸರ್ಕಾರವನ್ನು ಇನ್ಯಾವ ರೀತಿ ಎಚ್ಚರಿಸಬೇಕು. ನೀರಿಲ್ಲ, ಜನಗಳಿಗೆ ತೊಂದರೆಯಾಗಿದೆ. ದನಗಳು ಸತ್ತು ಹೋಗಿವೆ ಎಂದು ರೆಕಾರ್ಡ್ ಆಗಿದೆ. ಇನ್ನು ಯಾವ ರೀತಿಯಲ್ಲಿ ನಾವು ಸರ್ಕಾರವನ್ನು ಎದುರಿಸಬೇಕು.

ಅಧ್ಯಕ್ಷರು: ಈ ಪ್ರಶ್ನೆಗೆ ಉತ್ತರ ಮುಂದಿನ ಗುರುವಾರ ಬರುತ್ತದೆ.

ಶ್ರೀ ಬಿ.ಎಚ್. ಬನ್ನಿಕೋಡ್: ನಾನು ಸಾಹೇಬರನ್ನು ಕೇಳುತ್ತಿದ್ದೇನೆ. ಕುಡಿಯಲಿಕ್ಕೆ ನೀರಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ ಈಗಾಗಲೇ ಸ್ಕೇರ್‌ಸಿಟಿ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಅವರು ತಾಲ್ಲೂಕುವಾರು ಎಕ್ಸ್‌ಪೆಂಡಿಚರ್ ಕೇಳಿದ್ದಾರೆ. ಪ್ರತಿ ತಾಲ್ಲೂಕಿನಿಂದ ಇನ್‌ಫರ್‌ಮೇಷನ್ ಬರಬೇಕಾಗಿದೆ. ಅವುಗಳನ್ನೆಲ್ಲಾ ಕಲೆಕ್ಟ್ ಮಾಡಿ ಕಳುಹಿಸುವುದಕ್ಕೆ ಸ್ವಲ್ಪ ಲೇಟಾಗುತ್ತದೆ. ಸುಮಾರು 13-14 ತಾಲ್ಲೂಕುಗಳಿಂದ ಬರಬೇಕು. ಅದಕ್ಕಾಗಿ ನಾವು ಡೆಪ್ಯೂಟಿ ಕಮೀಷನರ್‌ಗಳಿಗೆ ಟೆಲೆಕ್ಸ್ ಕೊಟ್ಟು ಫೋನ್ ಮಾಡಿ ತಿಳಿಸಿದ್ದೇವೆ. ಆದರೂ ಇನ್ನೂ ಕಳುಹಿಸಿಲ್ಲ. ಕಲೆಕ್ಟ್ ಮಾಡುತ್ತಿದ್ದಾರೆ. ನಾಳೆ ಬಂದಮೇಲೆ ಮುಂದಿನ ಬುಧುವಾರ ತೆಗೆದುಕೊಳ್ಳೋಣ

ಶ್ರೀ ಬಿ.ಎಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ ಸದನದಲ್ಲಿ ಕೊನೆಗೆ ಉಳಿದಿರುವುದು ಧರಣಿ ಮಾಡುವುದು ಕುಡಿಯುವ ನೀರಿನ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ? ಮಾನ್ಯ ಮಂತ್ರಿಗಳು ಸಂಭಂಧಪಟ್ಟ ಅಧೀಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆಯೇ ಎನ್ನುವುದನ್ನು ಹೇಳಬೇಕು. ಮತ್ತು ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಸಾಕಷ್ಟು ಹಣವನ್ನು ಧಾರವಾಡ ಜಿಲ್ಲೆಗೆ ಕುಡಿಯುವ ನೀರಿಗಾಗಿ ನಾವು ಬಿಡುಗಡೆ ಮಾಡಿದ್ದೇವೆ. ಮತ್ತು ನಿನ್ನೆಯೂ ಕೂಡಾ ಮಾನ್ಯ ಸದಸ್ಯರು ಹೇಳಿದ ಮೇಲೆ ನಾನು ಸುಮಾರು 15 ಲಕ್ಷ ರೂಪಾಯಿಗಳನ್ನು ಧಾರವಾಡ ಜಿಲ್ಲೆಗೆ ಕುಡಿಯುವ ನೀರಿಗಾಗಿ ರಿಲೀಸ್ ಮಾಡಿದ್ದೇವೆ ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಅವರ ತಾಲ್ಲೂಕಿನಲ್ಲಿ ಒಂದೂ ಬೋರ್‌ವೆಲ್ ಆಗಿಲ್ಲವೆಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಡೆಪ್ಯೂಟಿ ಕಮೀಷನರ್‌ರವರಿಗೆ ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಭೂದಾಖಲಾತಿ ಸಹಾಯಕ ನಿರ್ದೇಶಕರುಗಳ ಕಛೇರಿಗಳಲ್ಲಿ ಅಳತೆಗೆ ಬಾಕಿ ಇರತಕ್ಕ ಕಡತಗಳ ಬಗ್ಗೆ.

530 - ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ), ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂದಾಖಲಾತಿ ಸಹಾಯಕ ನಿರ್ದೇಶಕರುಗಳ ಕಛೇರಿಗಳಲ್ಲಿ ಎಷ್ಟು ಕಡತಗಳು ಅಳತೆಗೆ ಬಾಕಿ ಇವೆ?

ಆ) ಅಳತೆಗೆ ಬಾಕಿ ಇರತಕ್ಕ ಕಡತಗಳನ್ನು ತಕ್ಷಣ ವಿಲೇವಾರಿ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಮಲ್ಲಿಕಾರ್ಜುನ ಎಂ. ಖರ್ಗೆ, (ಕಂದಾಯ ಸಚಿವರು) :

ಅ) ಒಟ್ಟು 1,38,382 ಕಡತಗಳು ಬಾಕಿ ಇರುತ್ತವೆ. ಸಿಬ್ಬಂದಿ ಕೊರತೆ ಇರುವುದರಿಂದ ಕಡತಗಳು ಬಾಕಿ ಇರುತ್ತವೆ.